quickmarketreports.com

Date : 03-11-2015

# ಭಾರತದ ಗೋಡಂಬಿ ಉತ್ಪಾದನೆ ರಫ್ತು 2014–15 ದಾಖಲೆ ರೂ. 5,500 ಕೋಟಿ

ಭಾರತದಿಂದ 2014–15ನೇ ಸಾಲಿನಲ್ಲಿ ಗೋಡಂಬಿ ಉತ್ಪಾದನೆಗಳ ರಫ್ತು ಸರ್ವಕಾಲಿಕ ದಾಖಲೆ ರೂ.5500 ಕ್ಕೆ ತಲುಪಿದೆಯೆಂದು ಭಾರತದ ಕ್ಯಾಶೂ ಎಕ್ಸ್‌ಪೋರ್ಟ್ಸ್ ಕೌನ್ಸಿಲ್ ಅಧ್ಯಕ್ಷ ಟಿ.ಕೆ. ಶಾಹಲ್ ಹಸನ್ ಮುಸ್ಲಿಯಾರ್ ಅವರು ವಾರ್ಷಿಕ ಜನರಲ್ ಬಾಡಿ ಮೀಟಿಂಗ್‌ನ್ನು ಉದ್ದೇಶಿಸಿ ಹೇಳಿದ್ದಾರೆನ್ನಲಾಗಿದೆ. ಪ್ರಸಕ್ತ ವರ್ಷದಲ್ಲಿ 919 ಡಾಲರ್ (ರೂ.5500 ಕೋಟಿ) ಒಟ್ಟು ಗೋಡಂಬಿ ಉತ್ಪಾದನೆ ರಫ್ತಿನಿಂದ 1.2 ಲಕ್ಷ ಟನ್ ಗೋಡಂಬಿ ತಿರುಳು ರಫ್ತಿನಿಂದ 910 ಮಿಲಿಯನ್ ಡಾಲರ್ (ರೂ.5330 ಕೋಟಿ) 11000 ಟನ್ ಗೋಡಂಬಿ ಸಿಪ್ಪೆ ಎಣ್ಣೆ ರಫ್ತಿನಿಂದ 9 ಮಿಲಿಯನ್ ಡಾಲರ್ (ರೂ.56 ಕೋಟಿ) ವಿದೇಶಿ ವಿನಿಮಯ ಗಳಿಕೆಯಾಗಿದೆಯೆಂದರು. ಗಾತ್ರದಲ್ಲಿ ಗೋಡಂಬಿ ತಿರುಳು ರಫ್ತು 4 ಶೇಕಡಾ ಹಾಗೂ ಮೌಲ್ಯದಲ್ಲಿ 7 ಶೇಕಡಾ ವೃದ್ಧಿಯಾಗಿದೆಯೆಂದರು. ಯುಎಸ್ಎ, ಯುಎಇ, ಮತ್ತು ನೆದರ್‌ಲ್ಯಾಂಡ್ಸ್ ಹಾಗೂ ಜಪಾನ್, ಸೌದಿ ಅರೇಬಿಯಾಗಳು ಪ್ರಮುಖ ಖರೀದಿದಾರರಾಗಿದ್ದಾರೆಂದರು. ಪ್ರಾದೇಶಿಕವಾಗಿ ಅಮೇರಿಕನ್ ಜೋನ್ 27 ಶೇಕಡಾ ಪಶ್ಚಿಮ ಏಶಿಯಾ ಮತ್ತು ಆಫ್ರಿಕಾ 33 ಶೇಕಡಾ, ಯುರೋಪ್ ಜೋನ್ 25 ಶೇಕಡಾ ಮತ್ತು ದಕ್ಷಿಣ ಪೂರ್ವ ಹಾಗೂ ದೂರ ಪೂರ್ವ ಏಶಿಯಾ ಜೋನ್ 14 ಶೇಕಡಾ ರಫ್ತಾಗಿದೆಯೆಂದರು. ಡೈರೆಕ್ಟೋರೇಟ್ ಆಫ್ ಕ್ಯಾಶೂ ಆಂಡ್ ಕೊಕ್ಕೊ ಡೆವಲಪ್‌ಮೆಂಟ್‌ನ ಅಂದಾಜಿನಂತೆ ಭಾರತದ 2014–15 ಕಚ್ಚಾ ಗೋಡಂಬಿ ಉತ್ಪಾದನೆ 7.25 ಲಕ್ಷ ಟನ್‌ಗಳು ಹಿಂದಿನ ವರ್ಷ 2013–14ರಲ್ಲಿ 7.36 ಲಕ್ಷ ಟನ್ ಉತ್ಪಾದನೆಯಾಗಿತ್ತೆನ್ನಲಾಗಿದೆ. 1.5 ಶೇಕಡಾ ಇಳಿಕೆಯಾಗಿದೆಯೆಂದು ಹೇಳಿದರು. ಗೋಡಂಬಿ ತಿರುಳು ಉತ್ಪಾದನಾ ಕೈಗಾರಿಕೆಗಳಿಗೆ 15 ಲಕ್ಷ ಟನ್ ಕಚ್ಚಾ ಗೋಡಂಬಿ ಅವಶ್ಯಕತೆಯನ್ನು ಆಂತರಿಕ ಲಭ್ಯತೆ ಬೇಡಿಕೆ ಅರ್ಧಾಂಶಕ್ಕಿಂತಲೂ ಕಡಿಮೆಯಿದ್ದು, ಉಳಿದ ಕಚ್ಚಾ ಗೋಡಂಬಿಯನ್ನು ಇತರ ಕಚ್ಚಾ ಗೋಡಂಬಿ ಬೆಳೆಯು ರಾಷ್ಟ್ರಗಳಿಂದ ಆಮದು ಮಾಡಲಾಗುತ್ತಿದೆಯೆಂದರು. ಕಚ್ಚಾ ಗೋಡಂಬಿ ಅವಶ್ಯಕತೆಯನ್ನು ಪೂರೈಸಲು, ಇತರ ರಾಷ್ಟ್ರಗಳ ಮೇಲಿನ ಆಮದು ಅವಲಂಬನೆಯನ್ನು ತಪ್ಪಿಸಲು ದೇಶದಲ್ಲೂ ಕಚ್ಚಾ ಗೋಡಂಬಿಯ ಕೃಷಿ ಹೆಚ್ಚಳವಾಗಿ ಉತ್ಪಾದನೆ ಹೆಚ್ಚಳವಾಗಬೇಕು, ಸರಕಾರ ಇದಕ್ಕಾಗಿ ಸಾಕಷ್ಟು ಧನ ಸಹಾಯವನ್ನೊದಗಿಸಿ ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಿಸಲು ಸಮರ್ಪಕ ಯೋಜನೆ ಹೊಂದಬೇಕೆಂದರು. ಮಾರ್ಚ್ ವರೆಗೆ ಲಭ್ಯವಾಗುತ್ತಿದ್ದ ರಫ್ತು ಸಹಾಯಧನ, ಈ ನಂತರ ಹಿಂತೆಗೆಯಲ್ಪಟ್ಟಿದೆ, ನಂತರ ಇದು ಪುನಃ ಲಭ್ಯವಾಗದಿರುವುದರಿಂದ ಕಚ್ಚಾ ಗೋಡಂಬಿ ದರ ಹೆಚ್ಚಳ ಹಾಗೂ ಸಂಸ್ಕರಣಾ ವೆಚ್ಚ ಹೆಚ್ಚಳದಿಂದ ಗೋಡಂಬಿ ಕೈಗಾರಿಕೆ ಕಷ್ಟದ ಸಮಯದಲ್ಲಿದೆಯೆಂದರು. ನಾವು ಕೇಂದ್ರ ಸರಕಾರವನ್ನು ಹಿಂದೆಗೆಯಲ್ಪಟ್ಟ ರಫ್ತು ಸಹಾಯ ಪ್ರೋತ್ಸಾಹ ಧನವನ್ನು 2014–15ರ ರಫ್ತು ಸಾಲಿಗೆ ಮತ್ತೆ ಅಳವಡಿಸಬೇಕೆಂದು ಕೇಳಿಕೊಂಡಿದ್ದರೂ ಈ ವರೆಗೆ ಧನಾತ್ಮಕ ಪ್ರತಿಕ್ರಿಯೆ ಬಂದಿಲ್ಲವೆಂದರು.